ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಆಹಾರ ವಿತರಣೆ ಬಗ್ಗೆ

721 (247) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿವಮೊಗ್ಗ ಜಿಲ್ಲೆಯಲ್ಲಿ 2009–10 ರಿಂದ 2012–13 ರವರೆಗೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಡೇ ಸ್ಕಾಲರ್‌ಗಳಿಗೆ ಆಹಾರ ವೆಚ್ಚವಾಗಿ ಪಾವತಿಸಿದ ಮೊಬಲಗಿನ ವಿವರ ನೀಡುವುದು;

ಆ) ಮೇಲ್ಕಂಡ ವಿದ್ಯಾರ್ಥಿಗಳಿಗೆ ನೇರವಾಗಿ ಆಹಾರ ವೆಚ್ಚವನ್ನು ಪಾವತಿಸಬೇಕು ಎಂಬ ಷರತ್ತನ್ನು ಎಷ್ಟು ಪ್ರಕರಣಗಳಲ್ಲಿ ಉಲ್ಲಂಘಿಸಿ ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರಿಗೆ ಪಾವತಿಸಲಾಗಿದೆಯೇ; ಪ್ರತಿ ಪ್ರಕರಣದ ವಿವರ ಒದಗಿಸುವುದು;

ಇ) ಮೇಲ್ಕಂಡ ವಿದ್ಯಾ ಸಂಸ್ಥೆಗಳ ಪೈಕಿ ಅಸ್ತಿತ್ವದಲ್ಲಿಯೇ ಇಲ್ಲದ ವಿದ್ಯಾ ಸಂಸ್ಥೆಗಳು ಎಷ್ಟು? ಇದರಿಂದ ಇಲಾಖೆಗೆ ಆಗಿರುವ ನಷ್ಟ ಎಷ್ಟು; (ತಾಲ್ಲೂಕುವಾರು ಪ್ರತ್ಯೇಕ ಮಾಹಿತಿ ನೀಡುವುದು)

ಈ) ವಸತಿ ನಿಲಯದ ಮಕ್ಕಳಿಗೆ ಊಟ–ತಿಂಡಿ ನೀಡುವ ಬದಲಾಗಿ ನಗದಾಗಿ/ಚೆಕ್ ಮೂಲಕ ಹಣ ಸಂದಾಯ ಮಾಡಲಾಗುತ್ತಿದೆಯೇ? (ಪೂರ್ಣ ವಿವರ ನೀಡುವುದು)

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು) :

ಅ) ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಡೇ ಸ್ಕಾಲರ್‌ಗಳಿಗೆ ಆಹಾರ ವೆಚ್ಚಕ್ಕಾಗಿ ಹಣವನ್ನು ಪಾವತಿಸುತ್ತಿಲ್ಲ.

ಆ) ಯಾವುದೂ ಇರುವುದಿಲ್ಲ

ಇ) ಯಾವುದೂ ಇರುವುದಿಲ್ಲ

ಈ) ಜಿಲ್ಲೆಯಲ್ಲಿ ವಸತಿ ನಿಲಯದ ಮಕ್ಕಳಿಗೆ ಇಲಾಖೆಯಿಂದಲೇ ಊಟ–ತಿಂಡಿಯನ್ನು ನೀಡಲಾಗುತ್ತಿದೆ. ಚೆಕ್ ಮೂಲಕ ಹಣ ನೀಡಿರುವುದಿಲ್ಲ.

ವಿದ್ಯುತ್ ಟ್ರಾನ್ಸ್‌ಫಾರ್ಮರ್

689 (266) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸುವ್ಯವಸ್ಥೆಯಲ್ಲಿವೆ ಹಾಗೂ ಎಷ್ಟು ದುಸ್ಥಿತಿಯಲ್ಲಿವೆ;

ಆ) ಕೆಟ್ಟಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಕೆಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳ ಜಿಲ್ಲಾವಾರು ವಿವರ ನೀಡುವುದು);

ಇ) ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಪ್ರಸ್ತುತ, ರಾಜ್ಯದಲ್ಲಿ ಜೂನ್ 2012ರ ಅಂತ್ಯದಲ್ಲಿದ್ದಂತೆ, ಹಾಲಿ ಇರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ 4,11,932. ಇವುಗಳಲ್ಲಿ 4,10,228 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಕಾರ್ಯನಿರ್ವಸುತ್ತಿದ್ದು, 1,704 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡಿರುತ್ತವೆ.

ಆ) ಪ್ರಸ್ತುತ, ರಾಜ್ಯಾದ್ಯಂತ ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲು ಒಟ್ಟು 67 ಟ್ರಾನ್ಸ್‌ಫಾರ್ಮರ್ ದುರಸ್ತಿ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ಕಂಪನಿವಾರು ವಿವರಗಳು ಈ ಕೆಳಕಂಡಂತಿವೆ:–